University of Mysore
**Yuvaraja's College (Autonomous)**
**(A CONSTITUENT AUTONOMOUS COLLEGE)**
Mysore – 570 005

**Proceedings of College Council meeting held on 06-12-2022 @ 12:45 PM in Chambers of the Principal:**

ಅಜೆಂಡಾ:

1. Open Elective ಬಗ್ಗೆ ಚರ್ಚೆ
2. ವಿಶ್ವವಿದ್ಯಾನಿಲಯ ಮಟ್ಟದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆ ಬಗ್ಗೆ ಚರ್ಚೆ
3. ಯುರೇಕಾ ಮತ್ತು ಪ್ರತಿಭಾನ್ವೇಷನೆ ಬಗ್ಗೆ ಚರ್ಚೆ
4. CPE and Autonomous Coordinator ನೇಮಿಸುವ ಬಗೆಗೆ
5. NAAC SSR Submission ಬಗ್ಗೆ ಚರ್ಚೆ

| Sl.No | Name of the Professor | Name of the Department | Signature |
|---|---|---|---|
| 1 | Prof. H.C.Devarajegowda | Principal | 6/12/22 |
| 2 | Prof.H.Somashekarappa | Administrative Officer | 6/12 |
| 3 | Prof.K.B.Umesha | Controller of Examination | OOD. |
| 4 | Dr.J.Rajesh | Bio-Chemistry | CL |
| 5 | Dr. K.A.Sharvani | Botany | |
| 6 | Prof.Chandavar Vidya R | Bio-Technology | 6/12/22 |
| 7 | Prof.H.P.Jayadevappa | Chemistry | 06/12/22 |
| 8 | Smt.Annapurna.H | Computer Science | |
| 9 | Sri Sadashivaiah.T | Electronics | |
| 10 | Dr.Yashoda Nanjappa | English | KYN 6/12/22 |
| 11 | Prof.S.Suresha | Environmental Science | |
| 12 | Dr.R.Shekar Naik | Food Science & Nutrition | 06/12/22 |
| 13 | Prof.M.R.Janardhana | Geology | Leave. |
| 14 | Dr.D.R.Jayaprakash | Hindi | |
| 15 | Dr.G.Sreenivas | Kannada | |
| 16 | Dr.C.Sumangala | Management Science | ABSENT |
| 17 | Dr.K.Shivashankar | Mathematics | |
| 18 | Prof. H.S.Jayanth | Micro-Biology | |
| 19 | Dr.Manjunath.B.C | Physics | |
| 20 | Dr.Deepak Bhat.K | Sanskrit | |
| 21 | Dr.H.B.Mahesh | Sericulture | |
| 22 | Dr.Bhat Sathish Shankar | Statistics | |
| 23 | Prof.Mahadevaswamy | Zoology | M.M |
| 24 | Prof.N.S.Devaki | Molecular Biology,Coordinator , IQAC | 6/12/2022 |
| 25 | Sri.Karthik | Sports Secretary, D.P.E,YCM | ABSENT |

## ದಿನಾಂಕ: 06-12-2022 ರಂದು ನಡೆದ ಕಾಲೇಜು ಕೌನ್ಸಿಲ್ ಸಭೆಯ ನಡಾವಳಿಗಳು

ದಿನಾಂಕ:06-12-2022 ರಂದು ಪ್ರಾಂಶುಪಾಲರ ಕೊಠಡಿಯಲ್ಲಿ ಮಧ್ಯಾಹ್ನ 12:45 ಗಂಟೆಗೆ ನಡೆದ ಕಾಲೇಜು ಕೌನ್ಸಿಲ್ ಸಭೆಯ ನಡಾವಳಿಗಳು

**ಪ್ರೊ. ಹೆಚ್.ಸಿ.ದೇವರಾಜೇಗೌಡ ಪ್ರಾಂಶುಪಾಲರು** ರವರು ಎಲ್ಲಾ ವಿಭಾಗದ ಮುಖ್ಯಸ್ಥರು ಹಾಗೂ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತ ಕೋರಿದರು

ದಿನಾಂಕ 25-11-2022 ರಂದು ಜರುಗಿದ ಕಾಲೇಜು ಕೌನ್ಸಿಲ್ ಸಭೆಯ ನಡಾವಳಿಯ ತೀರ್ಮಾನಗಳನ್ನು ಪ್ರಾಂಶುಪಾಲರು ರವರು ಸಭೆಗೆ ತಿಳಿಸಿದರು.

ದಿನಾಂಕ 01-12-2022 ರಂದು ಕನ್ನಡ ರಾಜ್ಯೋತ್ಸವವನ್ನು ಕಾಲೇಜಿನಲ್ಲಿ ಸುಗಮವಾಗಿ ಜರುಗಲು ಸಹಕರಿಸಿದ ಎಲ್ಲಾರಿಗೂ ಪ್ರಾಂಶುಪಾಲರು ರವರು ವಂದನೆಗಳನ್ನು ಸಲ್ಲಿಸಿದರು.

ದಿನಾಂಕ:06-12-2022 ರಂದು ನಡೆದ ಕಾಲೇಜು ಕೌನ್ಸಿಲ್ ಸಭೆಯಲ್ಲಿ ಈ ಕೆಳಕಂಡ ನಿರ್ಧಾರಗಳನ್ನು ಸಭೆಯಲ್ಲಿ ಚರ್ಚಿಸಿ ಎಲ್ಲರ ಅನುಮೋದನೆ ಪಡೆಯಲಾಯಿತು.

ಪ್ರತಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುವ ತಾತ್ಕಾಲಿಕ ಹಂಗಾಮಿ ಅಧ್ಯಾಪಕೇತರರ ಅಯಾ ತಿಂಗಳ ಸಂಬಳವನ್ನು ಅವರ ಹಾಜರಾತಿಯನ್ನು ವಿಭಾಗದ ಮುಖ್ಯಸ್ಥರುಗಳು ದೃಢೀಕರಿಸಿ ಕಛೇರಿಗೆ ಕಳುಹಿಸಿಕೊಡಲು ಸಭೆಯಲ್ಲಿ ಒಮ್ಮತ ನಿರ್ಧಾರ ತೆಗೆದುಕೊಳ್ಳಲಾಯಿತು. ಹಾಗೂ ವಿಭಾಗದಲ್ಲಿ ಕಾರ್ಯ ನಿರ್ವಹಿಸುವ ತಾತ್ಕಾಲಿಕ ಅಧ್ಯಾಪಕೇತರ ನೌಕರರು 2ನೇ ಮತ್ತು 4ನೇ ಶನಿವಾರದಂದು ತರಗತಿಗಳನ್ನು ಸುಗಮವಾಗಿ ನಡೆಸುವ ಉದ್ದೇಶದಿಂದ ಅರ್ಧ ದಿನ ಕರ್ತವ್ಯಕ್ಕೆ ಬರಬೇಕಂದು ಸಭೆಯು ನಿರ್ಧರಿಸಿತು.

**1. Open Elective ಬಗ್ಗೆ ಚರ್ಚೆ**

NEP ಅಡಿಯಲ್ಲಿ ಓದುತ್ತಿರುವ ಮೊದಲನೇ ಮತ್ತು ಮೂರನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ Open Electives ವಿಚಾರದಲ್ಲಿ ಅವರು ಓದುತ್ತಿರುವ Disciplinary Course ನ್ನು ಬಿಟ್ಟು ಉಳಿದ Disciplines Subject ಗಳನ್ನು ತೆಗೆದುಕೊಳ್ಳಲು ಸರ್ಕಾರದ ಆದೇಶದಂತೆ ಮಾಡಲು ಸಭೆಯು ತೀರ್ಮಾನಿಸಿತು.

NEP ಸಭೆಯಲ್ಲಿ ಕಾಲೇಜಿನ ಅಧ್ಯಾಪಕರೇ Open Elective ನ್ನು ಮಾಡಬೇಕೆಂದು ಹೇಳಿದ್ದಾರೆ ಹಾಗೂ Open Elective ನ್ನು ಕಾಲೇಜು ಕೌನ್ಸಿಲ್‌ನಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿರುವುದಾಗಿ ಪ್ರೊ. ಹೆಚ್.ಎಸ್ ಜಯಂತ್ ರವರು ಸಭೆಗೆ ತಿಳಿಸಿದರು.

ನಮ್ಮ ಕಾಲೇಜು ಸ್ವಾಯುತ್ತತಾ ಕಾಲೇಜು ಆಗಿರುವುದರಿಂದ ಸರ್ಕಾರದ ತೀರ್ಮಾನವನ್ನು ಅಂಗಿಕರಿಸಿ ವಿಶ್ವವಿದ್ಯಾನಿಲಯವನ್ನು ಬಿಡುವುದು ತಪ್ಪಾಗುತ್ತದೆ ಪ್ರೊ. ಎಸ್.ಸುರೇಶ್ ರವರು ಸಭೆಗೆ ತಿಳಿಸಿದರು. ಈ ವಿಚಾರದಲ್ಲಿ ವಿಶ್ವವಿದ್ಯಾನಿಲಯದವರನ್ನು ಮನವರಿಕೆ ಮಾಡಿದರೆ ಸೂಕ್ತ ಎಂದು ಪ್ರೊ. ಎಸ್.ಎಸ್.ದೇವಕಿ ರವರು ಸಭೆಗೆ ತಿಳಿಸಿದರು.

ಮೂರನೇ ಮತ್ತು ನಾಲ್ಕನೇ ಸೆಮಿಸ್ಟರ್ ರವರೆಗೆ Syllabus Submission ಮಾಡಲಾಗಿದೆ ಹಾಗೂ ಪ್ರತಿಯೊಂದು ಸ್ವಾಯುತ್ತತಾ ಕಾಲೇಜುಗಳು ಪಠ್ಯಕ್ರಮವನ್ನು (ಕೆರಿಕುಲಮ್ ಸಿಲಬಸ್)ನ್ನು ಬದಲಾವಣೆ ಮಾಡಲು ಅವಕಾಶವಿದೆ ಎಂದು ಪ್ರೊ. ಎಸ್.ಸುರೇಶ್ ರವರು ಸಭೆಗೆ ತಿಳಿಸಿದರು.

ಕೆಲವೊಂದು ಕಾಲೇಜಿನಲ್ಲಿ ಪಠ್ಯಕ್ರಮವನ್ನು (ಕೆರಿಕುಲಮ್ ಸಿಲಬಸ್)ನ್ನು ಮಾಡಲಾಗಿದೆ ಎಂದು ಶ್ರೀ. ಸದಾಶಿವಯ್ಯ ಟಿ ರವರು ಸಭೆಗೆ ತಿಳಿಸಿದರು.

Syllabus ನಲ್ಲಿ ಅಲ್ಪ-ಸ್ವಲ್ಪ ಬದಲಾವಣೆ ಮಾಡಲಾಗಿದೆ ಎಂದು ಪ್ರೊ. ಎಸ್.ಎಸ್.ದೇವಕಿ ರವರು ಸಭೆಯಲ್ಲಿ ಹೇಳಿದರು.

ಪಠ್ಯಕ್ರಮದಲ್ಲಿ 70% ನಷ್ಟು ಉಳಿಸಿಕೊಂಡು 30% ರಷ್ಟು ಬದಲಾವಣೆ ಮಾಡಬಹುದು ಎಂದು ಪ್ರೊ. ಎಸ್.ಸುರೇಶ್ ರವರು ಸಭೆಯಲ್ಲಿ ಹೇಳಿದರು.

ನಮ್ಮದು ಸ್ವಾಯುತ್ತತಾ ಕಾಲೇಜು ಆದ್ದರಿಂದ ಬದಲಾವಣೆಗೆ ಅವಕಾಶ ಕೊಡಬೇಕೆಂದು ಮಾನ್ಯ ಕುಲಪತಿಗಳನ್ನು ಕೇಳುವುದಾಗಿ ಸಭೆಯಲ್ಲಿನ ಸದಸ್ಯರುಗಳು ತಿಳಿಸಿದರು.

ಪಠ್ಯಕ್ರಮವನ್ನು ಸರ್ಕಾರ ಕೊಟ್ಟಿರುವ ಪಠ್ಯಕ್ರಮದ ಚೌಕಟ್ಟಿನಲ್ಲಿ ಸಿದ್ಧಗೊಳಿಸಿ ಕಾಲೇಜಿನ ಮಂಡಳಿಯ ಅನುಮೋದನೆಗೆ ಸಲ್ಲಿಸಲಾಗಿದೆ ಎಂದು ಸದಸ್ಯರುಗಳು ಸಭೆಗೆ ತಿಳಿಸಿದರು.

**2. & 3. ವಿಶ್ವವಿದ್ಯಾನಿಲಯ ಮಟ್ಟದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆ ಹಾಗೂ ಯುರೇಕಾ ಮತ್ತು ಪ್ರತಿಭಾನ್ವೇಷಣೆ ಬಗೆಗೆ**

ವಿಶ್ವವಿದ್ಯಾನಿಲಯ ಮಟ್ಟದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆ ಹಾಗು ಯುರೇಕಾ ಮತ್ತು ಪ್ರತಿಭಾನ್ವೇಷಣೆಯಲ್ಲಿ ಒಟ್ಟು 26 ಸ್ಪರ್ಧೆಗಳಿವೆ ಹಾಗೂ ಈ ಕಾರ್ಯಕ್ರಮಕ್ಕೆ ರಂಗಾಯಣದಿಂದ ನಿರ್ದೇಶಕರು ಬರುತ್ತಿರುವುದಾಗಿ ಪ್ರೊ. ರೂಬಿ ಸೆಲೆಸ್ಟಿನಾ ಎಂ ರವರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು.

ಈ ಕಾರ್ಯಕ್ರಮವು ದಿನಾಂಕ 8/12/2022 ರಿಂದ 10/12/2022 ರವರೆಗೆ ಇರುವುದಾಗಿ ಹಾಗೂ ಈ ಕಾರ್ಯಕ್ರಮಕ್ಕೆ 32 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರೊ. ರೂಬಿ ಸೆಲೆಸ್ಟಿನಾ ಎಂ ರವರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು.

ನಮ್ಮ ಕಾಲೇಜಿನಲ್ಲಿ ಇದುವರೆಗೂ ಪ್ರತಿಭಾನ್ವೇಷಣೆ ನಡೆಸಿಲ್ಲ ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಕಮಿಟಿ ಕೂಡ ರಚನೆಯಾಗಿಲ್ಲ ಎಂದು ಪ್ರೊ. ರೂಬಿ ಸೆಲೆಸ್ಟಿನಾ ಎಂ ರವರು ಸಭೆಗೆ ತಿಳಿಸಿದರು.

ಕಾಲೇಜಿನ ಗ್ರಂಥಾಲಯದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿಯನ್ನು ಒದಗಿಸಬೇಕೆಂದು ಪ್ರೊ. ಎಸ್.ಎಸ್.ದೇವಕಿ ರವರು ಸಭೆಗೆ ತಿಳಿಸಿದರು.

ಸಾಹಿತ್ಯ ಮತ್ತು ಸಾಂಸ್ಕೃತಿಕ ಸ್ಪರ್ಧೆ ಹಾಗೂ ಯುರೇಕಾ ಮತ್ತು ಪ್ರತಿಭಾನ್ವೇಷಣೆಗೆ ಸಂಬಂಧಿಸಿದಂತೆ ತಗಲುವ ವೆಚ್ಚವನ್ನು ನೀಡಲು ಸಭೆಯಲ್ಲಿನ ಸದಸ್ಯರುಗಳೆಲ್ಲರೂ ಒಮ್ಮತದಿಂದ ಒಪ್ಪಿದರು.

**4. CPE and Autonomous Coordinator ನೇಮಿಸುವ ಬಗ್ಗೆ**

CPE Grants ಗೆ ಒಬ್ಬರು Coordinator ನ್ನು ಮಾಡಲು ನಿರ್ಧರಿಸಲಾಗಿದೆ ಎಂದು ಪ್ರಾಂಶುಪಾಲರು ರವರು ಸಭೆಗೆ ತಿಳಿಸಿದರು ಹಾಗೂ ಪ್ರೊ. ಪಿ.ಜಿ.ಚಂದ್ರಶೇಖರ್ ರವರ ಹೆಸರನ್ನು ಶಿಫಾರಸ್ಸು ಮಾಡಿದರು
ಈ ವಿಷಯವಾಗಿ ಸಭೆಯಲ್ಲಿನ ಸದಸ್ಯರುಗಳೆಲ್ಲರೂ ಒಮ್ಮತದಿಂದ ಒಪ್ಪಿಗೆ ಸೂಚಿಸಿದರು.

Autonomous Coordinator ನೇಮಿಸುವ ಬಗೆಗೂ ಪ್ರಾಂಶುಪಾಲರು ರವರು ಸಭೆಗೆ ತಿಳಿಸಿದರು ಹಾಗೂ ಯಾರನ್ನಾದರು ಒಪ್ಪಿಸಲು ಸಹಕರಿಸಬೇಕೆಂದು ಸಭೆಯಲ್ಲಿನ ಸದಸ್ಯರುಗಳಿಗೆ ಹೇಳಿದರು. ಈ ವಿಷಯವಾಗಿ ಸಭೆಯಲ್ಲಿನ ಸದಸ್ಯರುಗಳೆಲ್ಲರೂ ಸಹಕರಿಸಲು ಒಪ್ಪಿಗೆ ಸೂಚಿಸಿದರು.

**5. NAAC SSR Submission ಬಗ್ಗೆ ಚರ್ಚೆ**

NAAC SSR ನ್ನು ಈ ತಿಂಗಳ ಅಂತ್ಯದಲ್ಲಿ Submission ಮಾಡಬೇಕು ಎಂದು ಪ್ರಾಂಶುಪಾಲರು ರವರು ಸಭೆಯಲ್ಲಿನ ಸದಸ್ಯರುಗಳಿಗೆ ಹೇಳಿದರು. ಈ ವಿಷಯವಾಗಿ ಎಲ್ಲಾ ಮಾಹಿತಿಗಳನ್ನು ತೆಗೆದುಕೊಳ್ಳಲು 15 ದಿನಗಳು ಬೇಕಾಗುತ್ತದೆ ಎಂದು ಪ್ರೊ. ಎನ್.ಎಸ್.ದೇವಕಿ ರವರು ಸಭೆಗೆ ತಿಳಿಸಿದರು.

NAAC ಇಂದ ಕಾಲೇಜಿಗೆ ಅನುಮೋದನೆ ತೆಗೆದುಕೊಳ್ಳದಿದ್ದರೆ ಕಾಲೇಜಿನ ಎಲ್ಲಾ ಕಾರ್ಯಗಳು ಅಸಿಂಧು ಎಂದಾಗುತ್ತದೆ ಎಂದು ಪ್ರಾಂಶುಪಾಲರು ರವರು ಸಭೆಯಲ್ಲಿನ ಸದಸ್ಯರುಗಳಿಗೆ ಎಚ್ಚರಿಕೆ ತಿಳಿಸಿದರು.

ಆದಷ್ಟು ಬೇಗ ಒಂದು ದಿನಾಂಕವನ್ನು ನಿಗದಿಪಡಿಸಿಕೊಂಡು NAAC ಗೆ ಹೋಗಬೇಕು ಎಂದು ಪ್ರಾಂಶುಪಾಲರು ರವರು ಸಭೆಯಲ್ಲಿನ ಸದಸ್ಯರುಗಳಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಎಲ್ಲಾ ವಿಭಾಗದ ಮುಖ್ಯಸ್ಥರುಗಳು ಎಲ್ಲಾ ಮಾಹಿತಿಗಳನ್ನು ತುರ್ತಾಗಿ ಸಂಗ್ರಹಿಸಿಕೊಂಡು ಅದನ್ನು IQAC Coordinator ಆದ ಪ್ರೊ. ಎನ್.ಎಸ್.ದೇವಕಿ ರವರಿಗೆ ನೀಡಲು ಸಭೆಯಲ್ಲಿನ ಸದಸ್ಯರುಗಳಿಗೆ ಪ್ರಾಂಶುಪಾಲರು ಹೇಳಿದರು. ಈ ವಿಷಯವಾಗಿ ಸಭೆಯಲ್ಲಿನ ಸದಸ್ಯರುಗಳು ಎಲ್ಲಾ ಮಾಹಿತಿಗಳನ್ನು ನೀಡುವುದಾಗಿ ತಿಳಿಸಿದರು.

Research paper link ನ್ನು ಕೊಡುವುದಾಗಿ ನ್ಯಾಕ್ ರವರು ಹೇಳಿದ್ದಾರೆ ಅದನ್ನು ಎಲ್ಲಾ ವಿಭಾಗದ ಮುಖ್ಯಸ್ಥರುಗಳು ಕೊಡಬೇಕೆಂದು ಪ್ರೊ. ಎನ್.ಎಸ್.ದೇವಕಿ ರವರು ಸಭೆಗೆ ತಿಳಿಸಿದರು. ಈ ವಿಚಾರವಾಗಿ ನಾನು ಮಾಹಿತಿಗಳನ್ನು ಸಂಗ್ರಹಿಸಲು ಅತಿಥಿ ಉಪನ್ಯಾಸಕರಿಗೆ ಹೇಳಿರುವುದಾಗಿ ಹಾಗೂ ಮೊದಲು ನ್ಯಾಕ್ ಗೆ ಸಂಬಂಧಿಸಿದಂತೆ ಯಾವ ಯಾವ ಕೆಲಸವಾಗಬೇಕು ಎಂದು ಒಂದು ಪಟ್ಟಿಯನ್ನು ಮಾಡಿಕೊಂಡು ನಂತರ ಅದನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕೆಂದು ಪ್ರೊ. ಕೆ.ಶಿವಶಂಕರ್ ರವರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು.

IQAC ಹೊಸ ಕಮಿಟಿಯು ರಚನೆಯಾಗಿರುವುದಾಗಿ ಹಾಗೂ ಕ್ರೈಟೀರಿಯಾ ಸಂಚಾಲಕರುಗಳು ಬಹುಬೇಗ ಮಾಹಿತಿಗಳನ್ನು ಒದಗಿಸಬೇಕೆಂದು ಪ್ರೊ. ಎನ್.ಎಸ್.ದೇವಕಿ ರವರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು.

ನ್ಯಾಕ್ ಗೆ ಶುಲ್ಕವನ್ನು ಪಾವತಿಸಿ ಅನುಮೋದನೆ ಆದ ನಂತರ 45 ದಿನಗಳ ಕಾಲಾವಕಾಶ ಇರುತ್ತದೆ ಅಷ್ಟರಲ್ಲಿ Submission ಮಾಡಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರೊ. ಹೆಚ್.ಸಿ.ದೇವರಾಜೇಗೌಡ ಪ್ರಾಂಶುಪಾಲರು ರವರು ಸಭೆಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

15/12/22

ಪ್ರಾಂಶುಪಾಲರು

ಪ್ರಾಂಶುಪಾಲರು
ಯುವರಾಜ ಕಾಲೇಜು (ಸ್ವಾಯತ್ತ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

University of Mysore
**Yuvaraja's College (Autonomous)**
**(A CONSTITUENT AUTONOMOUS COLLEGE)**
Mysore – 570 005

**Proceedings of College Council meeting held on 09-12-2022 @ 03:30 PM in Chambers of the Principal:**

**ಅಜೆಂಡಾ:**

1. ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಸಂಬಂಧ
2. UPS, 5KV - Sericulture Department
3. Xerox machine - Office
4. Roof Construction - Sericulture Department
5. Executive Chairs & Tables - Biochemistry Department
6. Tiles Replacement HOD'S Chambers & Laboratory- Biochemistry Department
7. Biogas Plant & Water Rechargeing - NAAC

| Sl.No | Name of the Professor | Name of the Department | Signature |
|---|---|---|---|
| 1 | Prof. H.C.Devarajegowda | Principal | [signature] |
| 2 | Prof.H.Somashekarappa | Administrative Officer | [signature] 9.12 |
| 3 | Prof.K.B.Umesha | Controller of Examination | [signature] |
| 4 | Dr.J.Rajesh | BioChemistry | ABSENT |
| 5 | Dr. K.A.Sharvani | Botany | [signature] 09/12/22 |
| 6 | Prof.Chandavar Vidya R | Bio-Technology | [signature] |
| 7 | Prof.H.P.Jayadevappa | Chemistry | ABSENT |
| 8 | Smt.Annapurna.H | Computer Science | ABSENT |
| 9 | Sri Sadashivaiah.T | Electronics | [signature] |
| 10 | Dr.Yashoda Nanjappa | English | Sadashivaiah.T |
| 11 | Prof.S.Suresha | Environmental Science | [signature] 9/12/2022 |
| 12 | Dr.R.Shekar Naik | Food Science & Nutrition | [signature] |
| 13 | Prof.M.R.Janardhana | Geology | Leave |
| 14 | Dr.D.R.Jayaprakash | Hindi | ABSENT |
| 15 | Dr.G.Sreenivas | Kannada | [signature] |
| 16 | Dr.C.Sumangala | Management Science | [signature] 09/12/2022 |
| 17 | Dr.K.Shivashankar | Mathematics | |
| 18 | Prof. H.S.Jayanth | Micro-Biology | Leave |
| 19 | Dr.Manjunath.B.C | Physics | [signature] |
| 20 | Dr.Deepak Bhat.K | Sanskrit | ABSENT |
| 21 | Dr.H.B.Mahesh | Sericulture | [signature] |
| 22 | Dr.Bhat Sathish Shankar | Statistics | Leave |
| 23 | Prof.Mahadevaswamy | Zoology | Leave |
| 24 | Prof.N.S.Devaki | Molecular Biology,Coordinator , IQAC | M.Mahadeva 9/12/2022 |
| 25 | Sri.Karthik | Sports Secretary, D.P.E,YCM | ABSENT |
| | | | ABSENT |

# ದಿನಾಂಕ: 09–12–2022 ರಂದು ನಡೆದ ಕಾಲೇಜು ಕೌನ್ಸಿಲ್ ಸಭೆಯ ನಡಾವಳಿಗಳು

ದಿನಾಂಕ:09–12–2022 ರಂದು ಮಧ್ಯಾಹ್ನ 03:30 ಗಂಟೆಗೆ ಪ್ರಾಂಶುಪಾಲರ ಕೊಠಡಿಯಲ್ಲಿ ನಡೆದ ಕಾಲೇಜು ಕೌನ್ಸಿಲ್ ಸಭೆಯ ನಡಾವಳಿಗಳು

**ಪ್ರೊ. ಹೆಚ್.ಸಿ.ದೇವರಾಜೇಗೌಡ** ಪ್ರಾಂಶುಪಾಲರು ರವರು ಎಲ್ಲಾ ವಿಭಾಗದ ಮುಖ್ಯಸ್ಥರು ಹಾಗೂ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತ ಕೋರಿದರು.

**1. ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಬಗೆಗೆ**

2022–23 ರ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಸದಸ್ಯರುಗಳಿಗೆ ಪ್ರಾಂಶುಪಾಲರು ರವರು ಸಭೆಯಲ್ಲಿ ಮಂಡಿಸಿದರು. ಸದರಿ ವಿಷಯಕ್ಕೆ ಪ್ರತಿಯಾಗಿ ಪ್ರೊ.ಕೆ.ಅಜಯ್ ಕುಮಾರ್ ಪ್ರಾಧ್ಯಾಪಕರು ರವರು ಒಂದು ಸಾಮಾನ್ಯ ಶುಲ್ಕವನ್ನು (Common fees) ನಿಗದಿಸಬೇಕು ಹಾಗೂ Non practical ವಿದ್ಯಾರ್ಥಿಗಳಿಂದ Laboratory ಶುಲ್ಕವನ್ನು ತೆಗೆದುಕೊಳ್ಳಬಾರದೆಂದು ವಿಶ್ವವಿದ್ಯಾನಿಲಯದ ಸಭೆಯಲ್ಲಿ ತಿಳಿಸಲಾಗಿದೆ ಎಂದು ಸಭೆಗೆ ಹೇಳಿದರು.

ವಿಶ್ವವಿದ್ಯಾನಿಲಯದಲ್ಲಿ ಯಾವ ಶುಲ್ಕವನ್ನು ನಿಗಧಿ ಪಡಿಸಿದ್ದಾರೋ ಅದನ್ನೆ ಗಣನೆಗೆ ತೆಗೆದುಕೊಳ್ಳಬೇಕಂದು ಪ್ರೊ. ಜೆ ರಾಜೇಶ್ ಪ್ರಾಧ್ಯಾಪಕರು ರವರು ಸಭೆಯಲ್ಲಿ ತಿಳಿಸಿದರು.

ಪ್ರತಿಯೊಂದು ವಿಭಾಗದಲ್ಲೂ ಬೇರೆ ಬೇರೆ ಶುಲ್ಕ ಇದೆ ಅದನ್ನು Scheme A ಮತ್ತು Scheme B ನಲ್ಲಿ ಒಂದೇ ರೀತಿಯ ಶುಲ್ಕವನ್ನು ಮಾಡುವುದಾಗಿ ಸಭೆಯಲ್ಲಿ ಚರ್ಚಿಸಲಾಗಿ, ನಂತರ ಈ ವಿಷಯಕ್ಕೆ ಸಂಬಂಧಿಸಿದಂತೆ Scheme A Rs 23,657/- (ಇಪ್ಪತ್ತ ಮೂರು ಸಾವಿರದ ಆರು ನೂರ ಐವತ್ತೇಳು ರೂಪಾಯಿಗಳು ಮಾತ್ರ) ಹಾಗೂ Scheme B Rs 40,000+23,657/- Total 63,657/- (ಅರವತ್ತ ಮೂರು ಸಾವಿರದ ಆರು ನೂರ ಐವತ್ತೇಳು ರೂಪಾಯಿಗಳು ಮಾತ್ರ) ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**2. & 4. UPS-5KV & Roof Construction - Sericulture Department**

ರೇಷ್ಮೆಕೃಷಿ (Sericulture Department) ವಿಭಾಗದ ಮುಖ್ಯಸ್ಥರು ಅವರ ವಿಭಾಗಕ್ಕೆ UPS-5KV and Roof Construction ಮಾಡಿಸಲು ಮನವಿ ಪತ್ರ ಕೊಟ್ಟಿದ್ದಾರೆ ಎಂದು ಪ್ರಾಂಶುಪಾಲರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿನ ಸದಸ್ಯರುಗಳೆಲ್ಲರೂ ಚರ್ಚಿಸಿ ಖರೀದಿಸಲು ಸಹಮತದಿಂದ ಒಪ್ಪಿಗೆ ಸೂಚಿಸಿದರು.

**3. Xerox machine - Office YCM**

ಕಾಲೇಜಿನ ಕಛೇರಿಯಲ್ಲಿರುವ Xerox machine ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸದ ಕಾರಣ ಒಂದು ಹೊಸ Xerox machine ನ್ನು ಖರೀಧಿಸುವ ಬಗೆಗೆ ಕಛೇರಿಯ ಸಾಮಾನ್ಯ ಅಧೀಕ್ಷಕರು ಮನವಿ ಪತ್ರ ಸಲ್ಲಿಸಿದ್ದಾರೆ ಎಂದು ಪ್ರಾಂಶುಪಾಲರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಕಛೇರಿಗೆ ಹೊಸ Xerox machine ನ್ನು ಖರೀಧಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

**5. & 6. Executive Chairs, Tables & Tiles Replacement in HOD'S Chambers & Laboratory - Biochemistry Department**

ಜೀವರಸಾಯನಶಾಸ್ತ್ರ (BioChemistry Department)ವಿಭಾಗದ ಮುಖ್ಯಸ್ಥರು 4 Executive Chairs & Tables ಹಾಗೂ Tiles Replacement of HOD'S Chambers and Laboratory ಅವಶ್ಯಕತೆ ಇದೆಂದು ಮನವಿ ಪತ್ರ ಸಲ್ಲಿಸಿರುವುದಾಗಿ ಪ್ರಾಂಶುಪಾಲರು ರವರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು.

ಈ ವಿಷಯವಾಗಿ ಸಭೆಯಲ್ಲಿನ ಸದಸ್ಯರುಗಳೆಲ್ಲರೂ ಚರ್ಚಿಸಿ ಖರೀದಿಸಲು ಒಮ್ಮತದಿಂದ ಒಪ್ಪಿಗೆ ಸೂಚಿಸಿದರು.

**7. Bio-gas Plant & Water Rechargeing - NAAC**

NAAC ಸಂಬಂಧಿಸಿದಂತೆ NAAC ನವರು Green Audit Committee ಶಿಫಾರಸ್ಸಿನಂತೆ ಕಾಲೇಜಿನಲ್ಲಿ Bio-gas Plant ಮತ್ತು Rain water harvesting (Water Rechargeing) ಮಾಡಿಸಲು ಮನವಿ ಪತ್ರ ನೀಡಿರುತ್ತಾರೆ. ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಿ ಇದನ್ನು ಕಾರ್ಯರೂಪಕ್ಕೆ ತರಲು ಮತ್ತು ತಗಲುವ ವೆಚ್ಚವನ್ನು ಕಾಲೇಜಿನಿಂದ ಭರಿಸಲು ನಿರ್ಧಾರ ತೆಗೆದುಕೊಳ್ಳಲಾಯಿತು.

**ಇತರೆ ವಿಷಯಗಳು**

ಹಿಂದಿನ ಸಭೆಯಲ್ಲಿ Autonomous Coordinator ನೇಮಿಸುವ ಬಗೆಗೆ ಚರ್ಚಿಸಲಾಗಿತ್ತು ಎಂದು ಪ್ರಾಂಶುಪಾಲರು ರವರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು ಅದರಂತೆ ಪ್ರೊ. ಜೆ ರಾಜೇಶ್ ಪ್ರಾಧ್ಯಾಪಕರು ರವರು ಒಪ್ಪಿಕೊಂಡಿರುವುದಾಗಿ ತಿಳಿಸಿದರು ಆಧ್ದರಿಂದ ಅವರನ್ನು Autonomous Coordinator ಹಾಗೂ CPE Coordinator ಆಗಿ ನೇಮಿಸಲು ಸಭೆಯು ತೀರ್ಮಾನಿಸಿತು.

**ಮುಂದುವರೆದು ಚರ್ಚಿಸುವಾಗ**

ಕಾಲೇಜಿನ ಎಲ್ಲಾ ಕಟ್ಟಡದ ಮೇಲ್ಛಾವಣಿ ದುರಸ್ತಿ ಆಗಿರುತ್ತದೆ ಅದರ ನಿರ್ವಹಣೆ ಮಾಡಿಸಬೇಕೆಂದು ಕೆಲವು ಸದಸ್ಯರು ಸಭೆಗೆ ತಿಳಿಸಿದರು. ಆದುದರಿಂದ ದುರಸ್ತಿ ಸರಿಪಡಿಸಲು ಸಭೆಯು ತೀರ್ಮಾನಿಸಲಾಯಿತು.
ಕಾಲೇಜಿನ ಟಾನ್ಸ್ ಫಾರಮ್ ನ್ನು ಶುಚಿಗೊಳಿಸಬೇಕು ಎಂದು ಪ್ರೊ. ಹೆಚ್.ಎಸ್ ಜಯಂತ್ ರವರು ಸಭೆಗೆ ತಿಳಿಸಿದರು.

Academic Council ಗೆ ಸಂಬಂಧಿಸಿದಂತೆ ವಿಭಾಗದ ಎಲ್ಲಾ ಮುಖ್ಯಸ್ಥರುಗಳು ಸದಸ್ಯರುಗಳು ಆಗಿರುತ್ತಾರೆ ಎಂದು ಪ್ರಾಂಶುಪಾಲರು ರವರು ಸಭೆಯಲ್ಲಿನ ಸದಸ್ಯರುಗಳಿಗೆ ತಿಳಿಸಿದರು
ಪ್ರೊ.ಹೆಚ್.ಸಿ.ದೇವರಾಜೇಗೌಡ ಪ್ರಾಂಶುಪಾಲರು ರವರು ಸಭೆಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

Hcdevarajegowda 18/11/22

ಪ್ರಾಂಶುಪಾಲರು

ಪ್ರಾಂಶುಪಾಲರು
ಯುವರಾಜ ಕಾಲೇಜು (ಸ್ವಾಯತ್ತ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005